FEBRUARY 13, 2026

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ವಿಜಯನಗರ ಜಿಲ್ಲೆ, ಹೊಸಪೇಟೆಯ** ಹಂಪಿಯಲ್ಲಿ, ಇಂದಿನಿಂದ ಮೂರು ದಿನಗಳ, ವಿಜೃಂಭಣೆಯ, ಹಂಪಿ ಉತ್ಸವ.
- **'ರೇಡಿಯೋ ಮತ್ತು ಕೃತಕ ಬುದ್ಧಿಮತ್ತೆ'** ವಿಷಯ ಕೇಂದ್ರಿತ, ವಿಶ್ವ ಬಾನುಲಿ ದಿನಾಚರಣೆ, ಇಂದು.
- **ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳನ್ನು,** ಕಾಲಮಿತಿಯಲ್ಲಿ ಸುಸ್ಥಿತಿಗೆ ತರಲು, ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ, ನಿರ್ದೇಶನ.
- **ಕೋಲಾರದಲ್ಲಿ,** 2 ಸಾವಿರಕ್ಕೂ ಹೆಚ್ಚು ಶಾಸನ ಹಾಗೂ ವೀರ್ಗಲ್ಲು ಪತ್ತೆ; ಈಕಂಬಳ್ಳಿ ಬಳಿ, ಸಂಗ್ರಹಾಲಯ ಸ್ಥಾಪಿಸಲು, ಜಿಲ್ಲಾಡಳಿತ, ಯೋಜನೆ.

<><><>

**ಈಗ ವಾರ್ತೆಗಳ ವಿವರ**

<><><>

**ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು,** ಯುನೆಸ್ಕೋ ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ, ಇಂದಿನಿಂದ ಮೂರು ದಿನಗಳ ಕಾಲ, ಜನೋತ್ಸವವಾಗಿ, ಹಂಪಿ ಉತ್ಸವ, ವಿಜೃಂಭಣೆಯಿಂದ ನಡೆಯಲಿದೆ. ಉತ್ಸವದ ಕುರಿತು, ಹೆಚ್ಚಿನ ಮಾಹಿತಿ ನಮ್ಮ ಪ್ರತಿನಿಧಿಯಿಂದ..

<><><>

**ಪೂರ್ಣಿಮಾ ಧಪ್ತರದಾರ ಧ್ವನಿ 60 ಸೆಕೆಂಡುಗಳು**

<><><>

**ಹಂಪಿ ಉತ್ಸವದ ಹಿನ್ನೆಲೆ,** ನಿನ್ನೆ ಸಂಜೆ, ಹೊಸಪೇಟೆಯ ಇತಿಹಾಸ ಪ್ರಸಿದ್ಧ, ಶ್ರೀ ವಡಕರಾಯ ದೇವಸ್ಥಾನದಿಂದ, 125 ಕಲಾ ತಂಡಗಳು, 'ವಸಂತ ವೈಭವ', ಮೆರವಣಿಗೆಯಲ್ಲಿ ಸಾಗಿದವು. ನಾಡದೇವಿ ಭುವನೇಶ್ವರಿ ಮೂರ್ತಿಯನ್ನು, ಆನೆ ಲಕ್ಷ್ಮೀ ಅಂಬಾರಿಯಲ್ಲಿ ಹೊತ್ತು ಸಾಗಿತು.

<><><>

**ಇಂದು ವಿಶ್ವ ಬಾನುಲಿ ದಿನ.** ಯುನೆಸ್ಕೋ, 2026ರ ವಿಶ್ವ ಬಾನುಲಿ ಸಮಾವೇಶವನ್ನು, 'ರೇಡಿಯೋ ಮತ್ತು ಕೃತಕ ಬುದ್ಧಿಮತ್ತೆ': ಎ.ಐ. ಒಂದು ಉಪಕರಣ; ಧ್ವನಿಯಲ್ಲ! ಎಂಬ ವಿ ´ಯದ ಮೇಲೆ, ಕೇಂದ್ರೀಕರಿಸಿದೆ. 1946, ವಿಶ್ವ ಸಂಸ್ಥೆಯಲ್ಲಿ, ರೇಡಿಯೊ ಸ್ಥಾಪನೆಯ, ವಾರ್ಷಿಕೋತ್ಸವದ ಹಿನ್ನೆಲೆ, ಯುನೆಸ್ಕೋದ ಸಾಮಾನ್ಯ ಸಭೆ, 2011ರ ಫೆಬ್ರುವರಿ 13 ಅನ್ನು ವಿಶ್ವ ರೇಡಿಯೊ ದಿನವೆಂದು ಘೋಷಿಸಿತು. 2012ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ಅಂತಾರಾಷ್ಟ್ರೀಯ ದಿನವಾಗಿ, ಘೋಷಿಸಿತು.ಶ್ರೀ ಸಾಮಾನ್ಯರ, ಸಂವಹನ ಮಾಧ್ಯಮವಾಗಿ ರೇಡಿಯೊ ಪ್ರಾಮುಖ್ಯತೆ, ಮಾಹಿತಿ, ಮನೋರಂಜನೆ ಮತ್ತು ಆರೋಗ್ಯಯುತ ಸಂವಾದ ಸಾಧ್ಯವಾಗಿಸುವಲ್ಲಿ, ಬಾನುಲಿ ಪಾತ್ರವನ್ನು ಗುರುತಿಸಲು, ಇಂದು, ವಿಶ್ವ ರೇಡಿಯೋ ದಿನ, ಆಚರಿಸಲಾಗುತ್ತಿದೆ.

<><><>

**ಆಕಾಶವಾಣಿಯ, ಛತ್ತೀಸ್‌ಘಡದ ರಾಯ್‌ಪುರ ಕೇಂದ್ರ,** ಇಂದು ವಿಶ್ವ ರೇಡಿಯೊ ದಿನದ ಅಂಗವಾಗಿ, ವಿಶೇಷ ಸಮಾವೇಶವನ್ನು, ಬೆಳಗ್ಗೆ 10 ಗಂಟೆಗೆ, ಹೊಟೇಲ್ ಬ್ಯಾಬಿಲೋನ್ ಕ್ಯಾಪಿಟಲ್‌ನಲ್ಲಿ ಆಯೋಜಿಸಿದೆ. ಛತ್ತೀಸ್‌ಘಡದ ಮುಖ್ಯಮಂತ್ರಿ, ವಿ ´ಣ್ಣು ದಿಯೋ ಸಾಯಿ, ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಆಕಾಶವಾಣಿಯ ಮಹಾನಿರ್ದೇಶಕರು ಸೇರಿದಂತೆ, ವಿಶೇಷ ಆಹ್ವಾನಿತ ಗಣ್ಯರು, ಪಾಲ್ಗೊಳ್ಳಲಿದ್ದಾರೆ.

<><><>

**ಬಳ್ಳಾರಿ ಜಿಲ್ಲೆಯ, ಮಾನವ ಅಭಿವೃದ್ಧಿ ವರದಿ–2025,** ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ವರದಿ–2030ರ ವರದಿ ತಯಾರಿಸಲು, ತಾಂತ್ರಿಕ ಬೆಂಬಲ ಸಂಸ್ಥೆಯಾಗಿ, ವಿಜಯನಗರ ಶ್ರೀ ಕೃ ´ಣದೇವರಾಯ ವಿಶ್ವವಿದ್ಯಾಲಯವನ್ನು, ರಾಜ್ಯ ಸರ್ಕಾರ ಆಯ್ಕೆ ಮಾಡಿ, ಕಾರ್ಯಾದೇಶ ನೀಡಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದ್ದಾರೆ. ಬಳ್ಳಾರಿಯಲ್ಲಿ ಜಿಲ್ಲಾ ಯೋಜನಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಜಿಲ್ಲೆಯ 5 ತಾಲೂಕುಗಳಲ್ಲಿ, ವಸತಿ, ಶಿಕ್ಷಣ, ಆರೋಗ್ಯ ಸೇವೆಗಳ ಸೌಲಭ್ಯ ಕಲ್ಪಿಸಲು, 5 ಸಾವಿರದ 500 ಕೋಟಿ ರೂಪಾಯಿ, ಯೋಜನಾ ವರದಿ ಸಿದ್ಧ ಪಡಿಸಲಾಗಿದೆ ಎಂದರು.

<><><>

**ವಾಣಿಜ್ಯ ತೆರಿಗೆ ಇಲಾಖೆ,** ಬೆಂಗಳೂರು, ದಕ್ಷಿಣ ವಲಯ ವ್ಯಾಪ್ತಿಯ, ಜಾರಿ  ಅಧಿಕಾರಿಗಳ ತಂಡ, ಸರಕು ಮತ್ತು ಸೇವಾ ತೆರಿಗೆ ಜಿ.ಎಸ್.ಟಿ. ವಿಭಾಗ 5ರ ಸಹಯೋಗದಲ್ಲಿ, ಪರಿಶೀಲನೆ ಕೈಗೊಂಡಿದ್ದು, ತೆರಿಗೆ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು, 25 ಕೋಟಿಗೂ ಅಧಿಕ 'ಖೊಟ್ಟಿ ಹೂಡುವಳಿ ತೆರಿಗೆ' – Fake Input Tax Credit ಪತ್ತೆ ಮಾಡಿದ್ದಾರೆ. ಯಲಹಂಕ, ಕಲ್ಯಾಣನಗರ, ಹೆಬ್ಬಾಳ, ಬಾಣಸವಾಡಿ, ಇಂದಿರಾನಗರ ಹಾಗೂ ದೇವನಹಳ್ಳಿ ಸೇರಿದಂತೆ, ಹಲವೆಡೆ ಪರಿಶೀಲನೆ ವೇಳೆ, ಇಲಾಖೆಗೆ ಸಲ್ಲಿಸಿದ ಸ್ವಯಂ ಘೋಷಿತ ತೆರಿಗೆ ವಿವರಗಳಿಗೂ, ವಾಸ್ತವಿಕ ವಹಿವಾಟಿಗೂ, ಗಣನೀಯ ವ್ಯತ್ಯಾಸವಿರುವುದು ಪತ್ತೆಯಾಗಿದೆ ಎಂದು, ಬೆಂಗಳೂರಿನ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ತಿಳಿಸಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳಿಗೆ,** ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಿ, ಮಕ್ಕಳ ಹಾಗೂ ಕೇಂದ್ರದ ಸಮಸ್ಯೆಗಳನ್ನು, ಆದ್ಯತೆ ಮೇಲೆ ಪರಿಹರಿಸುವಂತೆ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ, ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಬೆಂಗಳೂರಿನ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ, ನ್ಯಾಯ ದೇಗುಲ ಸಭಾಂಗಣದಲ್ಲಿ, ಸಂಬಂಧಿತ ಎಲ್ಲ ಇಲಾಖೆಗಳ, ಹಿರಿಯ ಅಧಿಕಾರಿಗಳ ಸಭೆ ನಡೆಸಿದರು. ರಾಜ್ಯದ ಹಲವಾರು ಅಂಗನವಾಡಿ ಕೇಂದ್ರಗಳು, ಶಿಥಿಲಾವಸ್ಥೆಯಲ್ಲಿವೆ. ನೈರ್ಮಲ್ಯ ಮತ್ತು ಶುಚಿತ್ವದ ಕೊರತೆ ಇದೆ. ಕೆಲವು ಅಂಗನವಾಡಿಗಳಲ್ಲಿ, ವಿಶೇ ' ಚೇತನ ಮಕ್ಕಳನ್ನು ದಾಖಲಿಸಿಕೊಳ್ಳಲು ನಿರಾಕರಿಸಿದ ದೂರುಗಳಿವೆ. ಕಳಪೆ ಗುಣಮಟ್ಟದ ಆಹಾರ ಪೂರೈಸಲಾಗುತ್ತಿದೆ. ಆಹಾರ ಪದಾರ್ಥಗಳ ಬಳಕೆಯ ಅಂತಿಮ ದಿನಾಂಕ ಸಹ ಪರಿಶೀಲಿಸದೆ, ಬಳಸಲಾಗುತ್ತಿದೆ. ವೈದ್ಯಕೀಯ ತಂಡ, ನಿಯಮಿತವಾಗಿ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ, ಮಕ್ಕಳ ಆರೋಗ್ಯ ಪರಿಶೀಲಿಸುತ್ತಿಲ್ಲ. ಕಾಲಮಿತಿಯಲ್ಲಿ ಎಲ್ಲ ಸರಿಪಡಿಸುವಂತೆ, ನ್ಯಾಯಮೂರ್ತಿಗಳು ನಿರ್ದೇಶಿಸಿದರು.

<><><>

**ಕೋಲಾರ ಜಿಲ್ಲೆಯಲ್ಲಿ ಪತ್ತೆಯಾದ,** 2 ಸಾವಿರಕ್ಕೂ ಹೆಚ್ಚು ಶಾಸನಗಳು ಹಾಗೂ ವೀರ್ಗಲ್ಲುಗಳನ್ನು ಒಂದೆಡೆ ಸಂರಕ್ಷಿಸಲು, ಈಕಂಬಳ್ಳಿ ಗ್ರಾಮದ ಬಳಿ, ಐದು ಎಕರೆ ವಿಸ್ತೀರ್ಣದ, ಒಳಾಂಗಣ ಮತ್ತು ಹೊರಾಂಗಣ ಸಂಗ್ರಹಾಲಯ ರೂಪಿಸುವ ಬಗ್ಗೆ, ಸಾಧ್ಯತಾ ವರದಿ ನೀಡುವಂತೆ, ಜಿಲ್ಲಾಧಿಕಾರಿ ಎಂ.ಆರ್. ರವಿ, ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾ ಪಾರಂಪರಿಕ ಸಂರಕ್ಷಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಕೋಲಾರ ತಾಲೂಕಿನ ನರಸಾಪುರ, ವೇಮಗಲ್, ಶ್ರೀನಿವಾಸಪುರದ ನಂಬಿಹಳ್ಳಿ ಹಾಗೂ ಮುಳಬಾಗಿಲಿನ ಹೆಬ್ಬಣಿ ಸೇರಿದಂತೆ, ಜಿಲ್ಲೆಯ ವಿವಿಧ ಭಾಗಗಳಲ್ಲಿರುವ ವೀರಗಲ್ಲುಗಳನ್ನು ಸಂರಕ್ಷಿಸಿ 'ಪಾರಂಪರಿಕ ಪಾರ್ಕ್'ಗಳನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ ಎಂದರು. ತೇರಹಳ್ಳಿಯ ಗಂಗರ ಕಾಲದ ದೇವಸ್ಥಾನ, ಹುಕ್ಕುಂದ ಹಾಗೂ ದೊಡ್ಡಶಿವಾರದಲ್ಲಿನ, ವೀರಗಲ್ಲುಗಳ ರಕ್ಷಣೆಗಾಗಿ, ನಿರಂತರ ಪೊಲೀಸ್ ಗಸ್ತು, ಜಿಲ್ಲೆಯ ಎಲ್ಲ ಪದವಿ ಕಾಲೇಜುಗಳಲ್ಲಿ, 'ಹೆರಿಟೇಜ್ ಕ್ಲಬ್'ಗಳನ್ನು', ಸಕ್ರಿಯಗೊಳಿಸಲು, ಸೂಚಿಸಿದರು.

<><><>

**ಹಾವೇರಿ ಜಿಲ್ಲೆ, ರಾಣಿಬೆನ್ನೂರಿನ,** ಬಿಲ್ಲಹಳ್ಳಿ ಗ್ರಾಮದ, ವನಸಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ, ನಿಸರ್ಗ ದೇಸಿ ಬೀಜ ಬ್ಯಾಂಕ್, ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದಲ್ಲಿ, ಅಪರೂಪದ ಹಾಗೂ ನಶಿಸಿ ಹೋಗಲಿರುವ, ಬೀಜ ಮತ್ತು ತಳಿಗಳನ್ನು ಉಳಿಸಿಕೊಳ್ಳಲು, ಶ್ರಮಿಸುತ್ತಿದೆ. ರಾಜಸ್ಥಾನ ರಾಜ್ಯದ ಪ್ರೇಮ್ ಸಮೃದ್ಧಿ ಪ್ರತಿಷ್ಠಾನದ ಪ್ರತಿನಿಧಿ ಪದಮ್ ಜೈನ್ ಹಾಗೂ ಸುಸ್ಥಿರ ಅಭಿವೃದ್ಧಿ ಸೊಸೈಟಿಯ ರವಿ, ನಿಸರ್ಗ ದೇಸಿ ಬೀಜ ಬ್ಯಾಂಕ್‌ಗೆ ಭೇಟಿ ನೀಡಿ, ಬೀಜ ಬ್ಯಾಂಕ್ ಕಾರ್ಯಾಚರಣೆ ವಿಧಾನ, ರೈತರು ಹಾಗೂ ಕೃಷಿಕ ಮಹಿಳೆಯರಿಗೆ, ನೀಡಲಾಗುತ್ತಿರುವ ತರಬೇತಿ ಕಾರ್ಯಕ್ರಮಗಳ ಬಗ್ಗೆ, ಮೆಚ್ಚುಗೆ ವ್ಯಕ್ತ ಪಡಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ರಾಣಿಬೆನ್ನೂರಿನ ವನಸಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ, ಕಾರ್ಯನಿರ್ವಾಹಕ ನಿರ್ದೇಶಕ, ಎಸ್.ಡಿ. ಬಳಿಗಾರ.

<><><>

**ಎಸ್.ಡಿ. ಬಳಿಗಾರ ಧ್ವನಿ 60 ಸೆಕೆಂದುಗಳು**

<><><>

**ಇಂದು ರಾಷ್ಟ್ರೀಯ ಮಹಿಳಾ ದಿನಾಚರಣೆ.** ಸ್ವಾತಂತ್ರ್ಯ ಚಳವಳಿಗೆ, ಭಾರತದ ಕೋಗಿಲೆ ಎಂದೇ ಖ್ಯಾತರಾದ, ಕವಯಿತ್ರಿ ಸರೋಜಿನಿ ನಾಯ್ಡು ಅವರ ಕೊಡುಗೆ, ಮತ್ತು, ಮಹಿಳಾ ಹಕ್ಕುಗಳ ಪ್ರತಿಪಾದಕಿಯಾಗಿ, ಅವರು ನಿರ್ವಹಿಸಿದ ಪಾತ್ರವನ್ನು ಸ್ಮರಿಸಿ, ಗೌರವಿಸುವ ದಿನ. 1879 ರ ಫೆಬ್ರುವರಿ 13, ಸರೋಜಿನಿ ನಾಯ್ಡು ಅವರ ಜನ್ಮದಿನ. ಅವರ ಜನ್ಮ ವಾರ್ಷಿಕೋತ್ಸವದಂದು, ಭಾರತೀಯ ಮಹಿಳೆಯರು ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲೂ ಹಾಗೂ ರಾಷ್ಟಕ್ಕೆ ನೀಡಿದ ಕೊಡುಗೆಯನ್ನು, ಈ ದಿನ ಸ್ಮರಿಸಲಾಗುತ್ತದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ವಿಜಯನಗರ ಜಿಲ್ಲೆ, ಹೊಸಪೇಟೆಯ** ಹಂಪಿಯಲ್ಲಿ, ಇಂದಿನಿಂದ ಮೂರು ದಿನಗಳ, ವಿಜೃಂಭಣೆಯ, ಹಂಪಿ ಉತ್ಸವ.
- **'ರೇಡಿಯೋ ಮತ್ತು ಕೃತಕ ಬುದ್ಧಿಮತ್ತೆ'** ವಿಷಯ ಕೇಂದ್ರಿತ, ವಿಶ್ವ ಬಾನುಲಿ ದಿನಾಚರಣೆ, ಇಂದು.
- **ರಾಜ್ಯದ ಎಲ್ಲ ಅಂಗನವಾಡಿ ಕೇಂದ್ರಗಳನ್ನು,** ಕಾಲಮಿತಿಯಲ್ಲಿ ಸುಸ್ಥಿತಿಗೆ ತರಲು, ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ, ನಿರ್ದೇಶನ.
- **ಕೋಲಾರದಲ್ಲಿ,** 2 ಸಾವಿರಕ್ಕೂ ಹೆಚ್ಚು ಶಾಸನ ಹಾಗೂ ವೀರಗಲ್ಲು ಪತ್ತೆ; ಈಕಂಬಳ್ಳಿ ಬಳಿ, ಸಂಗ್ರಹಾಲಯ ಸ್ಥಾಪಿಸಲು, ಜಿಲ್ಲಾಡಳಿತ, ಯೋಜನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>